<u>ದಿನಾಂಕಃ **19-04-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ವಕೀಲರಿಂದಃ</u>

ನಾನು ಎಲ್.ಎಲ್.ಬಿ., 5 ವರ್ಷದ ವ್ಯಾಸಂಗ ಮಾಡಿರುತ್ತೇನೆ. ದಾವಾ ಸ್ವತ್ತುಗಳನ್ನು ನಾನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಖರೀದಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತು 1 ನ್ನು ನಾನು ಹಿರಿಯಣ್ಣ ಭಟ್ ಹಾಗೂ ಇತರರಿಂದ ಖರೀದಿ ಮಾಡಿರುತ್ತೇನೆ. ನಾನು ದಾವಾ ಸ್ವತ್ತು 1 ನ್ನು ಖರೀದಿಸುವ ಕಾಲಕ್ಕೆ ಸದರಿ ಆಸ್ತಿಯ ಖಾತೆ ಹಿರಿಯಣ್ಣ, ಜ್ಯೋತಿ ಮತ್ತು ಇತರರ ಹೆಸರಲ್ಲಿ ಇತ್ತು. ದಾವಾ ಸ್ವತ್ತು 1 ಹಿರಿಯಣ್ಣ ಇವರಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಪಿತ್ರಾರ್ಜಿತ ಆಸ್ತಿ ಇತ್ತು ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 1 ನ್ನು ಖರೀದಿಸುವ ಕಾಲಕ್ಕೆ ನಾವು ಪಹಣಿ ಆಧಾರದ ಮೇಲೆ ಖರೀದಿ ಮಾಡಿರುತ್ತೇನೆ. ನಾನು ದಾವಾ ಸ್ವತ್ತು 1 ನ್ನು ಖರೀದಿಸುವ ಪೂರ್ವದಲ್ಲಿ ಮೂಲ ದಾಖಲಾತಿಗಳನ್ನು ಪಡೆದುಕೊಂಡರುತ್ತೇನೆ. ಸದರಿ ಮೂಲ ದಾಖಲಾತಿಗಳು ಪಹಣಿ, ಆರ್ .ಆರ್ ಇಂಡೆಕ್ಸ್, ಸ್ಕೆಚ್ ಇರುತ್ತದೆ. ಸದರಿ ದಾಖಲೆಯನ್ನು ಹೊರತುಪಡಿಸಿದ ಬೇರೆ ದಾಖಲೆ ಪಡೆದುಕೊಂಡ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ.

2. ನಾನು ದಾವಾ ಸ್ವತ್ತು 1 ನ್ನು ಖರೀದಿಸುವ ಪೂರ್ವದಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ನಮಗೆ ಹಿರಿಯಣ್ಣ ಭಟ್ , ಜ್ಯೋತಿ ಹಾಗೂ ಬಾಲಣ್ಣ ಭಟ್ ಇವರು ನಾವು ಖರೀದಿಸುವ ಆಸ್ತಿ ಇದೆ ಎಂದು ನಮಗೆ ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಸದರಿ ಆಸ್ತಿ ನೋಡಿದಾಗ 13 ವರ್ಷದ ಅಡಿಕೆ ಗಿಡ, ರಬ್ಬರ್ ಹಾಗುಾ ಖಾಲಿ ಜಾಗ ಇತ್ತು. ದಾವಾ ಸ್ವತ್ತು 1 ರ ಪಕ್ಕ ಹಳ್ಳ ಬರುತ್ತಿದ್ದು ಅದರ ಪಕ್ಕ ಇನ್ನೊಂದು ಆಸ್ತಿ ಇದ್ದು ಸದರಿ ಆಸ್ತಿಯ ಪಕ್ಕ ವಾದಿಗೆ ಸಂಬಂಧಿಸಿದ ಆಸ್ತಿ ಇತ್ತು ಸದರಿ ಜಮೀನಿನ ಎದುರುಗಡೆ ಹರಿಹರಪುರದಿಂದ ಕಮ್ಮರಡಿಗೆ ಹೋಗುವ ಮುಖ್ಯ ರಸ್ತೆ ಇತ್ತು. ನಾನು ಖರೀದಿಸುವ ಪೂರ್ವದಲ್ಲಿ ನಕ್ಷೆಯಲ್ಲಿ ಇದ್ದ ಗಡಿ ಗುರುತು ಹಾಗೂ ನಾವು ಖರೀದಿಸಲು ಇಚ್ಚಿಸಿದ ಆಸ್ತಿ ಸರಿಯಾಗಿ ಇತ್ತು.

3. ಸದರಿ ಜಮೀನಿನ ಯಾವ ದಿಕ್ಕಿಗೆ ಮುಖ್ಯ ರಸ್ತೆ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಸ್ವತ್ತು 1 ರ ಚೆಕ್ಕುಬಂಧಿಯನ್ನು ನಮ್ಮ ಪೂರ್ವ ಮಾಲೀಕರು ಹೇಳಿ ಬರೆಸಿರುತ್ತಾರೆ. ಖರೀದಿ ಪತ್ರದಲ್ಲಿ ಮುಖ್ಯ ರಸ್ತೆ ಹೋಗುವ ಬಗ್ಗೆ ತೋರಿಸಿರುತ್ತಾರ ಎಂದರೆ

ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಡಿ-2 ರಲ್ಲಿ ಮುಖ್ಯ ರಸ್ತೆ ಹಾದು ಹೋಗಿರುವ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ. ವಾದಿಯ ಜಮೀನು ನಾನು ಖರೀದಿಸಿದ ಜಮೀನಿನ ಪಕ್ಕ ಬರುತ್ತಿದ್ದು ಆದರೆ ಅದರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ವಾದಿಯ ಜಮೀನಿನ ಸರ್ವೆ ನಂಬರ್ 175/5 ಹಾಗೂ 264/3 ಬರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ- 1 ಮತ್ತು 2 ರಲ್ಲಿ ವಾದಿಯ ಜಮೀನು ಬಂದಿರುವ ಬಗ್ಗೆ ಚೆಕ್ಕುಬಂಧಿಯಲ್ಲಿ ತೋರಿಸಿರುತ್ತೀರ ಎಂದರೆ ಸಾಕ್ಷಿ ತೋರಿಸಿರಬಹುದು ಎಂದು ಉತ್ತರಿಸುತ್ತಾರೆ. ನಿಡಿ- 1 ಮತ್ತು 2 ರಲ್ಲಿ ಉದ್ದೇಶ ಪೂರ್ವಕವಾಗಿ ಚೆಕ್ಕುಬಂಧಿಯಲ್ಲಿ ವಾದಿಯ ಜಮೀನನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ವಾದಿ ತೋರಿಸಿದ ದಾವಾ ಸ್ವತ್ತು 1ರ ಚೆಕ್ಕುಬಂಧಿಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ನಮ್ಮ ವಕೀಲರಿಗೆ ಚೆಕ್ಕುಬಂಧಿಯ ಬಗ್ಗೆ ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ದಾವಾ ಸ್ವತ್ತು 2 ನ್ನು ನಾನು ಹಿರಿಯಣ್ಣ ಭಟ್, ಜ್ಯೋತಿ ಹಾಗೂ ಬಾಲಣ್ಣ ಭಟ್ ಇವರ ಕಡೆಯಿಂದ ಖರೀದಿಸಿರುತ್ತೇನೆ. ದಾವಾ ಸ್ವತ್ತು 2 ಸದರಿ ಯವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇರುತ್ತದೆ. ನಾನು ಪಹಣಿ ಪತ್ರಿಕೆ ಆಧಾರ ಮೇಲೆ ಜಮೀನನ್ನು ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತುಗಳನ್ನು ಒಂದೇ ದಿನ ಸ್ಥಳ ಪರಿಶೀಲನೆ ಮಾಡಿ ಖರೀದಿ ಮಾಡಿರುತ್ತದೆ. ದಾವಾ ಸ್ವತ್ತುಗಳು ಒಂದೇ ಚೆಕ್ಕುಬಂಧಿಯಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಸ್ವತ್ತು 2 ರ ಎದುರುಗಡೆ ಮುಖ್ಯ ರಸ್ತೆ ಹಾದು ಹೋಗುತ್ತದೆಯ ಎಂದರೆ ಸಾಕ್ಷಿ ಯಾವುದೋ ಒಂದು ರಸ್ತೆ ಹೋಗುತ್ತದೆ ಎಂದು ಉತ್ತರಿಸುತ್ತಾರೆ.

5. ದಾವಾ ಸ್ವತ್ತು 2 ಕ್ಕೆ ಚೆಕ್ಕುಬಂಧಿಯನ್ನು ನಮ್ಮ ಪೂರ್ವ ಮಾಲೀಕರು ಖರೀದಿ ಪತ್ರ ಆಗುವ ಕಾಲಕ್ಕೆ ಮಾಹಿತಿ ನೀಡಿರುತ್ತಾರೆ. ಸದರಿ ಚೆಕ್ಕುಬಂಧಿಯನ್ನು ಜಿ ಪಿ ಎಸ್ ಆಧಾರದ ಮೇಲೆ ಕೊಟ್ಟಿರುತ್ತಾರೆ. ದಾವಾ ಸ್ವತ್ತುಗಳ ಚೆಕ್ಕುಬಂಧಿ ತೋರಿಸಲು ನನ್ನ ಬಳಿ ನಕ್ಷೆ ಇರುತ್ತದೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ . ಸದರಿ ನಕ್ಷೆಯನ್ನು ಇಟ್ಟು ಖರೀದಿ ಪತ್ರ ಮಾಡಿರುತ್ತೀರ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಕಂದಾಯ ಕಟ್ಟಿದ ಬಗ್ಗೆ ಯಾವುದೇ ರಶೀದಿಯನ್ನು ನಾನು ಹಾಜರುಪಡಿಸಿರುವುದಿಲ್ಲ.

6. ನನಗೆ ವಾದಿ 10 ವರ್ಷಗಳಿಂದ ಪರಿಚಯ ಇರುತ್ತಾರೆ. ಈ ದಾವೆಯನ್ನು ವಾದಿ ಯಾವ ವಿಚಾರಕ್ಕಾಗಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಈ ದಾವೆಯ ವ್ಯವಹಾರ ಹೊರತುಪಡಿಸಿ ವಾದಿ ಮತ್ತು ನಮ್ಮ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ಕೊಪ್ಪದ ಕರ್ನಾಟಕ ಬ್ಯಾಂಕ್ ನಲ್ಲಿ ಎರಡು ಖಾತೆಗಳನ್ನು ಹೊಂದಿರುತ್ತೇನೆ. ವಾದಿಯು ನನಗೆ ರೂ.15,00,000/- ಚೆಕ್ಕನ್ನು ನೀಡಿ ಅದು ನನ್ನ ಖಾತೆ ವರ್ಗಾವಣೆ ಗೊಂಡಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಮ್ಮ ತಂದೆ ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಬ್ಯಾಂಕ್ ಖಾತೆ ಸಂಬಂಧಪಟ್ಟಂತೆ ವ್ಯವಹಾರ ಮಾಡಲು ನಾನು ನಮ್ಮ ತಂದೆಗೆ ಯಾವುದೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಯಾವ ಕಾರಣಕ್ಕಾಗಿ ವಾದಿಯಿಂದ 15 ಲಕ್ಷ ಹಣ ಪಡೆದುಕೊಂಡು ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತೀರಿ ಎಂಬುದರ ಬಗ್ಗೆ ನಾನು ಕೇಳಿರುತ್ತೇನೆ. ಸದರಿ 15 ಲಕ್ಷ ಹಣ ಈಗಲೂ ಸಹ ನನ್ನ ಖಾತೆಯಲ್ಲಿ ಹಾಗೆಯೇ ಇರುತ್ತದೆ. ಸದರಿ 15 ಲಕ್ಷ ಹಣ ನನ್ನ ಖಾತೆಯಲ್ಲಿ ಇರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

7. ವಾದಿ ಈ ದಾವೆ ಹೂಡುವ ಪೂರ್ವದಲ್ಲಿ ನನಗೆ ವಕೀಲರ ಮುಖಾಂತರ ನೋಟೀಸು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಾದ ಪತ್ರದ ಶೀರ್ಷಿಕೆಯಲ್ಲಿ ನಮೂದಿಸಿದ ವಿಳಾಸದಲ್ಲಿ ನಾನು ವಾಸ ಇರುತ್ತೇನೆ ಎಂದರೆ ಸರಿ. ನಿಪಿ- 7 ಮತ್ತು 9 ರಲ್ಲಿ ನಮೂದಿಸಿದ ವಿಳಾಸ ನನ್ನದೇ ಇರುತ್ತದೆ ಎಂದರೆ ಸರಿ. ನಾನು ನಿಪಿ- 7 ಮತ್ತು 9 ರ ದಾಖಲೆಯನ್ನು ತೆಗೆದುಕೊಳ್ಳಲು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ನ ವಿಚಾರವನ್ನು ನಟರಾಜ್ ಎಂಬ ವ್ಯಕ್ತಿಯ ಮುಖಾಂತರ ನನಗೆ ಗೊತ್ತಾಗಿರುತ್ತದೆ. ನಿಪಿ- 7 ಮತ್ತು 9 ರ ನಾನು ನೋಟೀಸು ತಲುಪದೇ ಇದ್ದ ಬಗ್ಗೆ ಅಂಚೆ ಕಛೇರಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ಸಹಿಯನ್ನು ಆಂಗ್ಲ ಭಾಷೆಯಲ್ಲಿ ಮಾಡುತ್ತೇನೆ. ಸಾಕ್ಷಿಗೆ ಪ್ರತಿವಾದ ಪತ್ರದಲ್ಲಿ ತಮ್ಮ ಸಹಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಸಹಿ ತಮ್ಮದೇ ಎಂದು ಹೇಳಿರುತ್ತಾರೆ. ಸಾಕ್ಷಿಗೆ ನಿಪಿ- 1 ನ್ನು ತೋರಿಸಲಾಗಿ ನಿಪಿ- 1 ರಲ್ಲಿ ನಿಮ್ಮ ಸಹಿ ಇರುತ್ತದೆ ಎಂದರೆ ಸಾಕ್ಷಿ ಸಹಿ ನನ್ನದಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 1 ರಂತೆ ನಾನು ಒಪ್ಪಂದ ಪತ್ರ ಮಾಡಿಕೊಟ್ಟ

ಕಾರಣ ವಾದಿ ಈ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ವಿಚಾರವನ್ನು ಈ ದಾವೆಯ ಸಮನ್ಸ್ ಪಡೆದುಕೊಂಡ ನಂತರ ನಮ್ಮ ತಂದೆ ಕಡೆಯಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನಮ್ಮ ತಂದೆಯ ಬಳಿ ನಾನು ಕರಾರು ಪತ್ರ ಆಗಿರುವ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ. ಕ್ರಯ ಕರಾರು ಪತ್ರದ ಒಂದು ಜೆರಾಕ್ಸ್ ಪ್ರತಿ ನಾನು ನೋಡಿರುತ್ತೇನೆ ಎಂದರೆ ಸಾಕ್ಷಿ ವಕೀಲರು ನಮ್ಮ ತಂದೆಗೆ ಕಳುಹಿಸಿದ್ದುರು ಎಂದು ಉತ್ತರಿಸುತ್ತಾರೆ.

8. ಕ್ರಯದ ಕಾರಾರು ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನಾನು ಪೊಲೀಸ್ ರವರಿಗೆ ದೂರನ್ನು ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ನಟರಾಜ್ ಬಾಳೆಮನೆ ಇವರು ದೂರು ಕೊಡಲು ಬಿಟ್ಟಿರಲಿಲ್ಲ ಎಂದು ಉತ್ತರಿಸುತ್ತಾರೆ. ಕರಾರು ಪತ್ರ ಆಗಿರುವ ವಿಚಾರ ನನಗೆ ಸದರಿ ಪತ್ರ ಆದ ಒಂದು ವಾರದ ನಂತರ ಗೊತ್ತಾಗಿರುತ್ತದೆ. ದಾವಾ ಆಸ್ತಿಯ ಸಂಬಂಧ ನಮ್ಮ ಮತ್ತು ವಾದಿಯರ ನಡುವೆ ಮಾತು ಕತೆ ಆಗಿರುತ್ತದೆ ಎಂದರೆ ಸಾಕ್ಷಿ ನಮ್ಮ ಮತ್ತು ನಟರಾಜ್ ಬಾಳೆಮನೆ ಇವರ ಸಮಕ್ಷಮ ಮಾತುಕತೆ ಆಗಿತ್ತು ಎಂದು ಉತ್ತರಿಸುತ್ತಾರೆ. ನಟರಾಜ್ ಬಾಳೆಮನೆ ಇವರು ತಂದೆಯ ಹೆಸರು ಮಂಜಪ್ಪ ಹೆಗ್ಡೆ ಎಂದರೆ ಸರಿ. ನಿಪಿ- 1 ಕರಾರು ಪತ್ರಕ್ಕೆ ನಟರಾಜ್ ಬಾಳೆಮನೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಇರಲಿಲ್ಲ ಎಂದು ಉತ್ತರಿಸುತ್ತಾರೆ. ಕರಾರು ಪತ್ರ ಆದ ದಿವಸ ಪ್ರಭಾಕರ್ ಕಾರಂತ್ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಟರಾಜ್ ಬಾಳೆಮನೆ ಸಹಿ ಮಾಡಿದ ದಾಖಲಾತಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಆ ಕಾಲಕ್ಕೆ 5 ದಿನಗಳ ಕಾಲ ಬೆಂಗಳೂರಿನಲ್ಲಿ ಇದ್ದೆ ಎಂದು ಉತ್ತರಿಸುತ್ತಾರೆ. ನಾನು ಆ ಕಾಲಕ್ಕೆ ಬೆಂಗಳೂರಿನಲ್ಲಿ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸುತ್ತೇನೆ.

9. ಕ್ರಯದ ಕರಾರು ಪತ್ರದ ಅಡಿಯಲ್ಲಿ ವಾದಿ ರೂ.15 ಲಕ್ಷ ಹಣ ಚೆಕ್ಕು ಮುಖಾಂತರ ನನ್ನ ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಸೇರಿದ ಜಮೀನನ್ನು ಮಾರಾಟ ಮಾಡುವ ಬಗ್ಗೆ ವಾದಿ ಹಾಗೂ ನಟರಾಜ್ ಬಾಳೆಮನೆ ಇವರು ನಡುವೆ ಮಾತುಕತೆಯಾಗಿತ್ತು. ನಮ್ಮ ತಂದೆ ಹಾಗೂ ವಾದಿಯ ನಡುವೆ ಕ್ರಯದ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ನಮ್ಮ ತಂದೆಯು ಸಹ 15 ಲಕ್ಷ ಹಣವನ್ನು ವಾದಿಯ ಕಡೆಯಿಂದ ಚೆಕ್ಕು ಮುಖಾಂತರ ಪಡೆದಿರುತ್ತಾರೆ ಎಂದರೆ ಸರಿ. ನಾವು

ಖರೀದಿಸಿದ ಆಸ್ತಿಗಳ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನಾವು ಖರೀದಿಸಿದಾಗಿನಿಂದ ಸ್ವಾಧೀನದಲ್ಲಿ ಇರುತ್ತೇವೆ ಎಂದು ಉತ್ತರಿಸುತ್ತಾರೆ. ನಮ್ಮ ಪೂರ್ವ ಮಾಲೀಕರಿಂದ ಕೇವಲ ಪಹಣಿ ಆಧಾರ ಮೇಲೆ ಖರೀದಿ ಮಾಡಿದ್ದನ್ನು ಹೊರತು ಪಡಿಸಿದ ನಾವಾಗಲೀ ಅಥವಾ ನಮ್ಮ ಪೂರ್ವ ಮಾಲೀಕರು ಯಾವತ್ತೂ ಸದರಿ ಆಸ್ತಿಯ ಸ್ವಾಧೀನ ಅನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದ ಕಾರಣ ನಾನು ನಿಪಿ-1 ರಂತೆ ವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಪೂರ್ವ ಮಾಲೀಕರು ಮಾಡಿಕೊಂಡ ವಿಭಾಗ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಮ್ಮ ಪೂರ್ವ ಮಾಲೀಕರು ಸದರಿ ಆಸ್ತಿಗಳ ಸ್ವಾಧೀನದಲ್ಲಿ ಇರದೇ ಇರುವ ಕಾರಣ ದಾವಾ ಆಸ್ತಿಗಳನ್ನು ವಿಭಾಗ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

10.ನಿಪಿ- 1 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂಬುದನ್ನು ರುಜುವಾತುಪಡಿಸಲು ಬೆರಳಚ್ಚು ತಜ್ಞರಿಗೆ ಕಳುಹಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ ಸಾಕ್ಷಿ ಮುಂದುವರೆದು ನನಗೆ ನಟರಾಜ್ ಬಾಳೆಮನೆ ಇವರ ಮೇಲೆ ಅನುಮಾನ ಇರುತ್ತದೆ ಎಂದು ಉತ್ತರಿಸುತ್ತಾರೆ. ನಟರಾಜ್ ಬಾಳೆಮನೆ ಇವರು ಕರಾರು ಪತ್ರಕ್ಕೆ ನನ್ನ ಸಹಿಯನ್ನು ನಕಲು ಮಾಡಿರುವ ಬಗ್ಗೆ ನನಗೆ ಅನುಮಾನ ಇರುತ್ತದೆ. ನಾನು ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ನನ್ನ ಸಹಿಯನ್ನು ನಟರಾಜ್ ಬಾಳೆಮನೆ ನಕಲು ಮಾಡಿರುವ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಬಾಳೆಮನೆ ನಟರಾಜ್ ಇವರು ನನಗೆ 25 ವರ್ಷಗಳಿಂದ ಪರಿಚಯ ಇರುತ್ತಾರೆ. ಸದರಿ ನಟರಾಜ್ ರವರ ತಂದೆ ಪ್ರತಿಷ್ಟಿತ ಕುಟುಂಬದಿಂದ ಬಂದಿದ್ದರು ಎಂದರೆ ಸರಿ. ನಟರಾಜ್ ಬಾಳೆಮನೆ ಇವರು ಯಾವ ಉದ್ದೇಶಕ್ಕಾಗಿ ನನ್ನ ಸಹಿಯನ್ನು ನಕಲು ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ನಟರಾಜ್ ಬಾಳೆಮನೆ ಇವರು ನನ್ನ ಸಹಿಯನ್ನು ಮಾಡಿರುತ್ತಾರೆ ಎಂದು ನನಗೆ ಅನುಮಾನ ಇರುತ್ತದೆ ಎಂದು ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ.

11. ನನ್ನ ಮತ್ತು ನನ್ನ ತಂದೆಯ ನಡುವೆ ಬಾಂಧವ್ಯ ಚೆನ್ನಾಗಿ ಇರುತ್ತದೆ. ನಮ್ಮ ತಂದೆ ಕೊಪ್ಪ ಹಾಗೂ ಚಿಕ್ಕಮಗಳೂರು ನ್ಯಾಯಾಲಯದಲ್ಲಿ 45 ವರ್ಷಗಳಿಂದ ವಕೀಲ

ವೃತ್ತಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ 5 ವರ್ಷಗಳಿಂದ ಅವರ ಆರೋಗ್ಯ ಸರಿಯಿಲ್ಲ ಎಂದು ಉತ್ತರಿಸುತ್ತಾರೆ. ನಾನು ಕಾನೂನು ಪಧವಿದರ ಇರುವ ಕಾರಣ ನನಗೆ ವ್ಯವಹಾರಗಳ ಬಗ್ಗೆ ಚೆನ್ನಾಗಿ ಜ್ಞಾನ ಇರುತ್ತದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ನಟಾರಾಜ್ ಬಾಳೆಮನೆ ವಿರುದ್ಧ ಕಾನೂನು ಕ್ರಮ ಕೈ ಗೊಂಡಿರುವುದಿಲ್ಲ ಎಂದರೆ ಸಾಕ್ಷಿ ಅವರು ರಾಜಿ ಸಂಧಾನ ಮಾಡಿಸುತ್ತೇನೆ ಎಂದು ಹೇಳಿದ ಕಾರಣ ಕ್ರಮ ಕೈಗೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಾನು ದಾವಾ ಆಸ್ತಿಯ ವಿಚಾರವಾಗಿ ವಾದಿ ಮತ್ತು ನಟಾರಾಜ್ ಬಾಳೆಮನೆ ಇವರಿಗೆ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ. 15 ಲಕ್ಷ ಹಣವನ್ನು ಮರು ಪಾವತಿ ಮಾಡುವ ಬಗ್ಗೆ ಕ್ರಮ ಕೈಗೊಂಡಿದ್ದು ಆಗ ನಟರಾಜ್ ರವರು ತಡೆಯುವಂತೆ ಹೇಳಿರುತ್ತಾರೆ.

12. ನನ್ನ ಮತ್ತು ನಟರಾಜ್ ಬಾಳೆಮನೆ ನಡುವೆ ಸಣ್ಣಪುಟ್ಟ ವ್ಯವಹಾರ ಸಂಬಂಧ ಘರ್ಷಣೆ ಇರುತ್ತದೆ. ಸದರಿ ಕರಾರು ಪತ್ರದ ವಿಚಾರವಾಗಿ ಮಾತ್ರ ನನ್ನ ಮತ್ತು ನಟರಾಜ್ ನಡುವ ಘರ್ಷಣೆ ಇರುತ್ತದೆ. ನಿಪಿ- 1 ರಲ್ಲಿ ನನ್ನ ಸಹಿ ಇದ್ದರೂ ಸಹ ನಾನು ಕ್ರಯ ಪತ್ರ ಬರೆದುಕೊಡಬೇಕಾಗುತ್ತದೆ ಎಂದು ನಿಪಿ- 1 ರಲ್ಲಿ ಇರುವ ಸಹಿ ನನ್ನದು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಸಂಬಂಧ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳ ಸ್ವಾಧೀನದಲ್ಲಿ ಎಂದೂ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ- 1 ರಲ್ಲಿರುವ ವಿಚಾರಗಳನ್ನು ನಾನು ವೈಯಕ್ತಿಕವಾಗಿ ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ- 1 ರಲ್ಲಿನ ವಿಚಾರಗಳ ಬಗ್ಗೆ ನಿಮ್ಮ ವಕೀಲರಿಗೆ ಏನಾದರೂ ಮಾಹಿತಿ ಕೊಟ್ಟಿದ್ದೀರ ಎಂದರೆ ಸಾಕ್ಷಿ ಅವರು ಪ್ರಶ್ನೆ ಕೇಳಿದರು ನಾನು ಉತ್ತರ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಉದ್ದೇಶ ಪೂರ್ವಕವಾಗಿ ವಾದಿ ಅವರ ವಕೀಲರ ಮುಖಾಂತರ ಕಳುಹಿಸಿದ ನೋಟೀಸನ್ನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ